ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

70

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 16/4/21

# ಗಾಂಧಿವಾದಿ ಸದಾಶಿವ ಭೋಸಲೆ ನಿಧನ

**ಬೆಳಗಾವಿ:** ಮಾಜಿ ಶಾಸಕ ಹಾಗೂ ಅಪ್ಪಟ ಗಾಂಧಿವಾದಿ ಸದಾಶಿವ ಬಾಪುಸಾಹೇಬ ಭೋಸಲೆ(101) ಗುರುವಾರ ಬೆಳಗ್ಗೆ ತಾಲೂಕಿನ ಕಡೋಲಿ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಪುತ್ರ, ಪುತ್ರಿ ಇದ್ದಾರೆ. ಬೆಳಗಾವಿ ಎಸಿ ಅಶೋಕ ತೇಲಿ ಅವರು ಭೋಸಲೆ ಅವರಿಗೆ ಅಂತಿಮ ನಮನ ಸಲ್ಲಿಸಿದರು.



**ಶಾಸಕ ಸ್ಥಾನಕ್ಕೆ ರಾಜೀನಾಮೆ:** 1946ರಲ್ಲಿ ಮುಂಬಯಿ ವಿಧಾನಸಭೆಗೆ ಬೆಳಗಾವಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. 1951ರಲ್ಲಿ ಕಡೋಲಿ ಗ್ರಾಮದಲ್ಲಿ ಕಸ್ತೂರಬಾ ಕೇಂದ್ರ ಆರಂಭಿಸಿ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ನೀಡುತ್ತಿದ್ದರು. ಸ್ವಾತಂತ್ರ್ಯಾ ನಂತರ ನಡೆದ ಮೊದಲ ಚುನಾವಣೆಯಲ್ಲಿ (1952ರಲ್ಲಿ) ಬಾಗೇವಾಡಿ ಕ್ಷೇತ್ರದಿಂದ ಮುಂಬಯಿ ವಿಧಾನಸಭೆಗೆ ಅವರು ಪುನಾರಾಯ್ಕೆಯಾಗಿದ್ದರು. 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದಾಗ ಅಂದಿನ ಮೈಸೂರು ಸರಕಾರದ ಶಾಸಕರಾಗಿ ಮುಂದುವರಿದಿದ್ದರು. 1957ರಲ್ಲಿನಡೆದ ಭೂದಾನ ಚಳವಳಿಯಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

1958ರಲ್ಲಿ ದೇವಗಿರಿ ಗ್ರಾಮದಲ್ಲಿ ಗಾಂಧಿಘರ್ ಸ್ಥಾಪಿಸಿ ಗಾಂಧಿವಾದ, ಸಾವಯವ ಕೃಷಿ ಜಾಗೃತಿ ಮೂಡಿಸುವಲ್ಲಿ ತೊಡಗಿಸಿಕೊಂಡಿದ್ದರು. ಇಳಿ ವಯಸ್ಸಿನಲ್ಲೂ ಚರಕದಿಂದ ನೂಲು ತೆಗೆಯುತ್ತಿದ್ದರು. ನೂಲನ್ನು ಮಗ್ಗಕ್ಕೆ ಕೊಟ್ಟು ಅದರಿಂದ ಜುಬ್ಬಾ ಮತ್ತು ಪೈಜಾಮ್ ಮಾಡಿಸಿಕೊಂಡು ಧರಿಸುತ್ತಿದ್ದರು.